ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಗಜೇಂದ್ರಗಡ

ಸಿ.ಸಿ. ನಂ. 748/2025

ಸಿ.ಡಬ್ಲೂಃ 1 ಪಿ.ಡಬ್ಲೂಃ 1

ಹೆಸರುಃ ಅಬ್ದುಲ್‌ರಹಮಾನಸಾಬ್ ನದಿಮುಲ್ಲಾ

ತಂದೆಯ ಹೆಸರುಃ ಇಮಾಮ್ಸಾಬ್

ವಯಸ್ಸುಃ 67 ವರ್ಷ

ಉದ್ಯೋಗಃ ನಿವೃತ್ತ ಉದ್ಯೋಗಿ

ವಿಳಾಸಃ ಗಜೇಂದ್ರಗಡ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 10-03-2026 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ**

ನಾವು ಕುಟುಂಬ ಸಮೇತ ಗಜೇಂದ್ರಗಡದಲ್ಲಿ ವಾಸವಾಗಿರುತ್ತೇವೆ. ನನಗೆ ಒಟ್ಟು 3 ಜನ ಮಕ್ಕಳು. ನನ್ನ ಮಗ ಇರ್ಫಾನ್ ಅಹಮ್ಮದ ರವರು ಖಾಸಗಿ ಕಂಪನಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದರು. ದಿಃ 11.02.2025 ರಂದು ಮಃ 04.00 ಗಂಟೆ ಸುಮಾರಿಗೆ ನಾನು ನನ್ನ ಮನೆಯಲ್ಲಿ ಊಟಕ್ಕೆ ಕುಳಿತ್ತಿದ್ದಾಗ ಚಾಸಾ.5 ರವರು ನನಗೆ ಫೋನ್ ಮಾಡಿ ನಿಮ್ಮ ಮಗನಿಗೆ ಗಜೇಂದ್ರಗಡದ ಈದ್ಗಾ ಮೈದಾನದ ಎದುರುಗಡೆ ಅಪಘಾತವಾಗಿದೆ ಎಂದು ಹೇಳಿದ್ದು ಕೂಡಲೆ ನಾನು ಸ್ಥಳಕ್ಕೆ ಹೋಗಿ ನೋಡಲಾಗಿ ಅಲ್ಲಿ ಇರಲಿಲ್ಲ. ಅಲ್ಲಿಂದ ಕಾರೂಡಗಿ ಮಠ ಆಸ್ಪತ್ರೆಗೆ ಹೋಗಿದ್ದಾರೆ ಎಂದು ಗೊತ್ತಾಗಿದ್ದು, ಸ್ಥಳದಲ್ಲಿ ನಾನು ವಿಚಾರಿಸಲಾಗಿ ಚೌಕಿ ಮಠದಿಂದ ಈದ್ಗಾ ಮೈದಾನದ ಕಡೆ ನನ್ನ ಮಗ ಬೈಕ್ನಲ್ಲಿ ತನ್ನ ಸ್ನೇಹಿತನಾದ ಚಾಸಾ.6 ರವರ ಜೊತೆ ಹೋಗುತ್ತಿದ್ದಾಗ ಚೆನ್ನಮ್ಮ ಸರ್ಕಲ್ ಕಡೆಯಿಂದ ಬೈಕ್ ಸಂಖ್ಯೆ ಕೆ.ಎ. 26 ಇಇ.4442 ನೇದ್ದನ್ನು ಗೌಡ್ರ ಎನ್ನುವವ, ಹೀರೆಕೊಪ್ಪದ ನಿವಾಸಿ ರಭಸದಿಂದ ಚಾಲನೆ ಮಾಡಿ ನನ್ನ ಮಗ ಹೋಗುತ್ತಿದ್ದ ಬೈಕಿಗೆ ಡಿಕ್ಕಿ ಪಡಿಸಿದ್ದರಿಂದ ಅಪಘಾತವಾಗಿರುತ್ತದೆ ಎಂದು ನಾನು ತಿಳಿದುಕೊಂಡಿರುತ್ತೇನೆ. ನಾನು ಸದರಿ ಆಸ್ಪತ್ರೆಗೆ ನೋಡಲಾಗಿ ನನ್ನ ಮಗನ ತಲೆಗೆ ಮತ್ತು ಮುಖಕ್ಕೆ ರಕ್ತಗಾಯವಾಗಿ, ಕಾಲು ಮತ್ತು ಕೈಗೆ ತರಚಿದ ಗಾಯವಾಗಿತ್ತು, ಆತನು ಪ್ರಜ್ಞಾಹೀನ ಸ್ಥಿತಿಯಲ್ಲಿ ಇದ್ದನು. ಚಾಸಾ.6 ರವರಿಗೂ ಅಲ್ಪಸ್ವಲ್ಪ ಗಾಯವಾಗಿತ್ತು. ಡಿಕ್ಕಿ ಪಡಿಸಿದ ಬೈಕ್ ಚಾಲಕನಿಗೆ ಗಾಯವಾಗಿರಲಿಲ್ಲ. ನನ್ನ ಮಗನನ್ನು ಗದಗ ಚಿರಾಯು ಆಸ್ಪತ್ರೆಗೆ

ಕರೆದುಕೊಂಡು ಹೋಗಿ ದಾಖಲಿಸಿರುತ್ತೇನೆ. ಸದರಿ ಆಸ್ಪತ್ರೆಯಲ್ಲಿ ಒಟ್ಟು 15 ದಿನಗಳ ಕಾಲ ನನ್ನ ಮಗನನ್ನು ಚಿಕಿತ್ಸೆಗಾಗಿ ದಾಖಲಿಸಿದ್ದು ನಂತರ ಪ್ರತಿ 15 ದಿನಗಳಿಗೊಮ್ಮೆ ಚಿಕಿತ್ಸೆಗಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಈಗಲೂ 2-3 ತಿಂಗಳಿಗೊಮ್ಮೆ ನನ್ನ ಮಗ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಈಗಲೂ ನನ್ನ ಮಗ ಭಯಗೊಂಡು ತಲೆ ಚಚ್ಚಿಕೊಳ್ಳುವುದು ಮತ್ತು ಗಾಬರಿಯಾಗುವುದು ಮಾಡುತ್ತಿದ್ದು ಇನ್ನು ಸಂಪೂರ್ಣವಾಗಿ ಚೇತರಿಕೆಯಾಗಿಲ್ಲ. ಈಗ ನನ್ನ ಮಗನಿಗೆ 37 ವರ್ಷ ವಯಸ್ಸು ಇರುತ್ತದೆ. ನಾನು ವಿಚಾರಿಸಿದಂತೆ ಬೈಕ್ ಸಂಖ್ಯೆ ಕೆ.ಎ. 26 ಇಇ. 4442 ನೇದ್ದರ ಬೈಕ್ ಚಾಲಕನ ತಪ್ಪಿನಿಂದ ಆಗಿರುತ್ತದೆ. ನಂತರ ನಾನು ಪೊಲೀಸರ್ ಠಾಣೆಗೆ ಹೋಗಿ ದೂರು ದಾಖಲಿಸಿರುತ್ತೇನೆ. ನಂತರ ಪೊಲೀಸರು ಸ್ಥಳಕ್ಕೆ ಬಂದು ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆಗಾಗಿ ಅಪಘಾತದ ಸ್ಥಳವನ್ನು ಪೊಲೀಸರಿಗೆ ನಾನೇ ತೋರಿಸಿರುತ್ತೇನೆ. ಪೊಲೀಸರು ಪಂಚನಾಮೆ ಮಾಡಿ ಪೋಟೋ ತೆಗೆದಿರುತ್ತಾರೆ. ನಂತರ ಪೊಲೀಸ್ ಠಾಣೆಯಲ್ಲಿ ಅಪಘಾತಕ್ಕೆ ಒಳಪಟ್ಟ 2 ಬೈಕ್ಗಳನ್ನು ಜಪ್ತು ಪಡಿಸಿಕೊಂಡರು. ವಾಹನ ಜಪ್ತು ಪಂಚನಾಮೆ ಮಾಡಿದರು.

2. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.1 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಥಳ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.2 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಘಟನಾ ಸ್ಥಳದ ಕಚ್ಚಾ ಹಾತ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.3 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.3 ಎ ಎಂದು ಗುರುತಿಸಲಾಯಿತು. ಸಾಕ್ಷಿಯು 2 ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಪಿ.4 ಮತ್ತು 5 ಎಂದು ಗುರುತಿಸಲಾಯಿತು. ಸಾಕ್ಷಿಯು ಅಪಘಾತಕ್ಕೆ ಒಳಗಾದ ವಾಹನಗಳ ಜಪ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.6 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.6 ಎ ಎಂದು ಗುರುತಿಸಲಾಯಿತು. ಸಾಕ್ಷಿಯು 7 ಪೋಟೊಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿ.ಪಿ. 7 ರಿಂದ 13 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : ಶ್ರೀ ಎಸ್.ಬಿ.ಹೆಚ್. ಆರೋಪಿಯ ಪರ ವಕೀಲರಿಂದ</u>**

ನಾನು 10 ನೇ ತರಗತಿಯವರೆಗೆ ಶಾಲೆ ಕಲಿತಿದ್ದೇನೆ. ದೂರನ್ನು ಯಾವಾಗ ಎಲ್ಲಿ ಮತ್ತು ಯಾರು ಬರೆದರು ಎನ್ನುವ ಪ್ರಶ್ನೆಗೆ ಸಾಕ್ಷಿಯು ಪೊಲೀಸರು ಪೊಲೀಸ್ ಠಾಣೆಯಲ್ಲಿ ಬರೆದಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನನಗೆ ಫೋನ್ ಮಾಡಿ ಹೇಳಿದ್ದರಿಂದ ಮಲ್ಲನಗೌಡ ಗೌಡರ ತಪ್ಪಿ ನಿಂದ ಅಪಘಾತವಾಗಿರುತ್ತದೆ ಎಂದು ನನಗೆ ಗೊತ್ತಾಗಿರುತ್ತದೆ. ನಾನು ಕಣ್ಣಾರೆ ಅಪಘಾತ ನೋಡಿಲ್ಲ. ನನ್ನ ಮಗನ ತಪ್ಪಿನಿಂದ ಅಪಘಾತವಾದರು ಸಹ ಪರಿಹಾರ ಕೊಟ್ಟಿಲ್ಲ ಎನ್ನುವ ಕಾರಣಕ್ಕೆ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಿರ್ಲಕ್ಷ್ಯತನದಿಂದ ವಾಹನ ಚಲಾಯಿಸಿಲ್ಲ, ನನ್ನ ಮಗನು ಆ ಕಡೆ ಈ ಕಡೆ ನೋಡದೆ ರಸ್ತೆಯಲ್ಲಿ ವಾಹನ ಚಲಾಯಿಸಿ ಆರೋಪಿತನ ಬೈಕ್ ಗೆ ಡಿಕ್ಕಿ ಪಡಿಸಿದ್ದರಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಆರೋಪಿ ನಾವು ಕೇಳಿದ್ದಷ್ಟು ಪರಿಹಾರ ಕೊಟ್ಟಿಲ್ಲ ಎನ್ನುವ ಕಾರಣಕ್ಕೆ ಘಟನೆ ಆರೋಪಿ ತಪ್ಪಿನಿಂದ ಆಗದೇ ಇದ್ದರು ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಕಡೆಯಿಂದ ಪರಿಹಾರ ಪಡೆದು ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರಿಗೆ ನಾನು ಮರು ಹೇಳಿಕೆ ನೀಡಿಲ್ಲ.

ಮರುವಿಚಾರಣೆ ಇಲ್ಲಃ

**( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು )**

ಓ.ಹೇ.ಕೇ. ಸರಿ ಇದೆ.

(ಹುಲುಗಪ್ಪ ಡಿ.)
ಪ್ರಧಾನ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ
ನ್ಯಾಯಾಧೀಶರು ರೋಣ.